Regd No B G 155

1672

10—9—1965

ಸತ್ಯವಾದಿ

49th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿಂದ ಸಿಂಸ್ಕೇದಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷ ನಿಶ್ಯಕ್ತಿಗೆ ಖಚಿತ ಯಾದ ಗುಣ : ಯೌವನದಲ್ಲಿಯೆ ಮುಪ್ಪಾದಂತೆ ಭಾವಿಸುವವರು ಮತ್ತು ಸಂಸಾರದಲ್ಲಿ ಜಿಗುಪ್ಸೆ ಹೊಂದಿದವರು ಇಂದೇ ಡಾ || ಮೋತಿಯವರ ಸಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯಂ ಋತು ಸ್ರಾವದ ತೊಂದರೆ, ವೀರ್ಯ ಇದೇ ರೀತಿಯು ಸಕಲ ಗುಪ್ತ ರೋಗಗಳನ್ನೂ ಪೂರ್ಣವಡಿಸುವರು

ಜನತಾ ಡಿಸ್ಪೆನ್ಸರಿ

ಪ್ರತಿ ದಿನವೂ ಬೆಳಿಗ್ಗೆ 10 ರಿಂದ 1
ಸಲಹೆ ಕಾಲ ಸಂಜೆ 4 ರಿಂದ 8

ಹೆಡ್ ಆಫೀಸ್ :
ಸುಬೇದಾರ್ ಚತ್ರಂ ರೋಡ್
ಬೆಂಗಳೂರು 9 : ಫೋನ್ ನಂಬ್ರ 75332.

ಮುನ್ನೆಚ್ಚರಿಕೆ

ಅನಾಮಧೇಯ, ಬರ್ನಪುರ, ದುರ್ಗಾಪುರ ಚಿತ್ರರಾಜ್ ಕೈಗಾರಿಕಾ ಪಟ್ಟಣಗಳಲ್ಲಿ ನಾಗರೀಕರ ರಕ್ಷಣಾ ಮಾರ್ಗಕ್ಕಾಗಿ ಪೂರ್ಣ ಬ್ಲಾಕ್ ಔಟು ಅಜ್ಞೆ ಮಾಡಲಾಗಿದೆ

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಕಕ್ಷ, ಜ್ಯೋತಿರ್ವಿದ್ವನ್ಮಣಿ
ಸಂಪಶ್ಯಕೃಷ್ಣಜೋಯಿ ಸಂವರಿಂಡ

11 ಶನಿವಾರ ಪಾಡ್ಯ ಪೂರ್ವಾಭಾದ್ರ
ಮಹಾಲಯಾರಂಭ

★

ವಿಶೇಷ

ಕರಾಚಿ — ಭಾರತದಲ್ಲಿ ಕಯಾರಾದ ಜಲಚ್ಛಿತ್ರ ಪ್ರದರ್ಶನವನ್ನು ಪಾಕಿಸ್ತಾನ ಸರಕಾರ ಪ್ರತಿಬಂಧಿಸಿದೆ

ಪೋಪರ ಚಿಂತೆ

ವೆಟಿಕಾನ್‌ನಗರ — ಪೋಪು ಪಾಲರು ಇಂಡೋ-ಪಾಕ್ ಕದನದ ಬಗ್ಗೆ ಕುಂಬಾ ವನನೊಂದುಕೊಂಡಿರುವರೆಂದು ವಂದಿಯಾಗಿದೆ

ಭಾವೆಯವರ ಸೂಚನೆ

ವಾರಣಾಸಿ — 1947 ರಲ್ಲಿ ಭಾರತಕ್ಕೆ ಒದಗಿದ್ದ ಪರಿಸ್ಥಿತಿ ಈಗ ಒದಗಿದೆ: ಪಾಕಿಸ್ತಾನದ ಆಕ್ರಮಣ ಕಾರ್ಯ ಭಾರತಕ್ಕೆ ತೀವ್ರ ಪರಿಸ್ಥಿತಿ ಉಂಟುಮಾಡಿದೆ : ಎಂದು ಕಡೆಯವರೂ ಅಹಿಂಸಾ ರೀತಿ ಮೂಡ ಕತೆ ನಡೆಸಿ ತಮ್ಮ ಸಮಸ್ಯೆ ಪರಿಹರಿಸಿಕೊಳ್ಳಬೇಕೆಂದು ಆಚಾರ್ಯ ಭಾವೆ ಸೂಚಿಸಿದ್ದಾರೆ.

ರಷ್ಯಾ ಮಧ್ಯಸ್ಥಿಕೆ

ಮಾಸ್ಕೊ — ಭಾರತ-ಪಾಕಿಸ್ತಾನಗಳು ಇಷ್ಟಪಟ್ಟರೆ ಶಾಂತಿಸ್ಥಾಪನೆಗೆ ಮಧ್ಯಸ್ಥಿಗೆ ವಹಿಸುವದಾಗಿ ರಷ್ಯಾ ತಿಳಿಸಿದೆ

ಭಾರತಕ್ಕೆ ಜೀಪುಗಳು

ಟೋಕಿಯೊ — ಸ.ಮಾರು ರೂ 140 ಲಕ್ಷ ಮೌಲ್ಯದ ಜೀಪುಗಳನ್ನು ಒಂದು ಜಪಾನಿ ತಯಾರಿಕಾ ಸಂಸ್ಥೆ ಭಾರತಕ್ಕೆ ಕ್ಷಿಪ್ರದಲ್ಲೇ ರವಾನೆ ಮಾಡಲಿದೆ.

ಕಲ್ಕತ್ತಾಕ್ಕೆ 50 ಮೈಲಿಗಳ ದೂರದಲ್ಲಿರುವ ಗೋಜಾ ಡಾಂಗ ಗಡಿಯಲ್ಲಿ ಬಂಧಿಸಲಾದ ಮಹಜಿದ್ ಎಂದು ಹೇಳಲಾದ ಪಾಕೀಸ್ತಾನಿ ರಾಷ್ಟ್ರಿಯನ ಬಂಧನವಾಯಿತು. ಅವನಲ್ಲಿದ್ದ ಅಸಬ್ಬಿವಿಜನ್‌ನ ಎಂಡು ಸೆಟ್ ಮ್ಯಾಪುಗಳನ್ನು ವಶಪಡಿಸಿಕೊಳ್ಳಲಾಯಿತು. ಕೆಲ ಸುದ್ದಿ ಶೇಖರಣೆಗೆ ತಾನು ಬಂದುದಾಗಿ ತಿಳಿಸಿದನು.

ವಾರ್ತಾ ವಿಶೇಷಗಳು

ಪಂಜಾಬು, ಉತ್ತರ ಪ್ರದೇಶ, ದೆಹಲಿ, ಬಂಗಾಳಗಳಲ್ಲಿ ಪಾಕೀಸ್ತಾನಿ ವಿಮಾನ ಕೊಡಯುವರ ಬಂಧನವಾಗಿದೆ.

★

ಬೆಂಗಳೂರಿನ ಭಾರತ ಟೆಲಿಫೋನ್ ಇಂಡಸ್ಟ್ರಿ ಕೆಲಸಗಾರರು ಸಂಪೂರ್ಣ ಜಾತಿ ದಿನವನ್ನು ಕೆಲಸ ಮಾಡಿ ಆ ದಿನದ ಹಣವನ್ನು ರಕ್ಷಣಾ ನಿಧಿಗೆ ಕೊಡಲು ನಿರ್ಧರಿಸಿದೆ ಇದರಿಂದ ರೂ 60 ಸಾವಿರ ಸಿಗುವುದು

★

ಬರ್ಮಾದ ವಿಮಾನ ಸೇವೆ ರಂಗೂನಿನಿಂದ ಕಲ್ಕತ್ತಾಕ್ಕೆ ವಿಮಾನ ಹಾರಾಟ ನಿಲ್ಲಿಸಿದೆ

★

ಪಾಕೀಸ್ತಾನದ ಮೂರು ಹಡಗುಗಳನ್ನು ಭಾರತ ಸರಕಾರ ಹಿಡಿದು ನಿಲ್ಲಿಸಿದೆ

★

ರಾಷ್ಟ್ರೀಯ ತುರ್ತು ಪರಿಸ್ಥಿತಿಗಾಗಿ ವಾರ್ಡಿವೆಂಟು 10 ಗಂಟೆಯಿಂದ 4 ಗಂಟೆವರೆಗೆ ನಡೆಯುವದು

★

ವಿಶ್ವವಿದ್ಯಾನಿಲಯದ ಮೇಲೆ ಕೇಂದ್ರ ಸರ್ಕಾರದ ಹತೋಟಿ ಇದೆ ಎಂಬ ಸದಸ್ಯರ ಸಲಹೆಯು ಲೋಕಸಭೆಯಲ್ಲಿ ತಿರಸ್ಕರಿಸಲ್ಪಟ್ಟಿತು

★

ಭೂಮಿಯನ್ನು ನುಂಗುತ್ತಿರುವ ಬ್ರಹ್ಮಪುತ್ರ ಪ್ರವಾಹ ಹಾವಳಿಯನ್ನು ಪರಿಶೀಲಿಸಿ ಸೂಕ್ತ ಸಲಹೆ ಕೊಡಲು ಅಮೆರಿಕದ ಒಬ್ಬ ನಿಪುಣರನ್ನು ಆಹ್ವಾನಿಸಲಾಗುತ್ತದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಟೊಂಕುಗಳ ನಾಶ

ಭಾರತದ ಪಡೆಗಳು 75 ಪಾಕೀಸ್ತಾನದ ಟ್ಯಾಂಕುಗಳನ್ನು ಎಂಡು ಘರ್ಷಣೆಗಳಲ್ಲಿ ನಾಶ ಮಾಡಿತು ಅಕಾಶೋದು ವೃತ್ತದಲ್ಲಿ ಪಾಕೀಸ್ತಾನಿ ಎದ ರಸುವಿಳೆಯನ್ನು ಅವಂಗೆ ತುಂಬ ನಷ್ಟದಿಂದ ತಳ್ಳಲಾಯಿತು

ಕೂಚಬಿಹಾರ ಜಿಲ್ಲೆಯ ಗಡಿ ಪಟ್ಟಣವಾದ ಚತಾಲ್ಡ ವೆಲೆ ನಗ್ಗಿ ಬಂದ ಪಾಕೀಸ್ತಾನಿಗಳನ್ನು ಹಿಂದಕ್ಕೆ ಒಟ್ಟಲಾಯಿತು ಎಂದು ಕಲ್ಕತ್ತಾ ವರ್ತೆ

ದೇಶದ ಅಧ್ಯಂತ ವಳನೂರು ಪಾಕೀಸ್ತಾನಿ ವಿನಾಶಕಾರಿಯು ಮತ್ತು ಪಾಕಿಸ್ತಾನ ಪಂದವರನ್ನು ಬಂಧಿಸಲಾಯಿತು

ಕೆಲವು ಪರಿಶ್ಯಗಳ ಮೇಲೆ ರಕ್ಷಣಾ ಸಮಿತಿಯು ನಿರ್ಧಾರದಂತೆ ವಿಶ್ವವಿದ್ಯಾಲಯ ಪ್ರಧಾನ ಕಾರ್ಯದರ್ಶಿಗಳ ಇಚ್ಛೆ ಪ್ರಕಾರ ಕದನ ನಿಲ್ಲಿಸಬಹುದು

ಪಾಕೀಸ್ತಾನ ಗಡಿಯನ್ನು ಭಾರತ ದಾಟುವದನ್ನು ಖಂಡಿಸುವ ನಿರ್ಣಯ ಭದ್ರತಾ ಸಮಿತಿಯಲ್ಲಿ ಬಂದರೆ ಅದನ್ನು ರಷ್ಯ ವೀಟೋ ಮಾಡುವದು

ಶಾಂತಿ ಸ್ಥಾಪನೆ ಥಾಂಟಿಂದ ವಿಫಲವಾದರೆ ಬ್ರಿಟಿಷು ಪ್ರಧಾನಿ ವಿಲ್ಸನರು ಕೈಗೊಳ್ಳುವರು

ಭಾರತ ಪಾಕೀಸ್ತಾನದ ಕದನ ಪ್ರಯುಕ್ತ ಈ ವರ್ಷ ದಸರಾ ನಿಲ್ಲಿಸಿದೆ ಎಂದು ವಿದೇಶದಿಂದ ಬಂದ ಮಹಾರಾಜರು ಈ ಸಲಹೆ ನೀಡಿದರೆಂದೂ ಹೇಳಲಾಗಿದೆ

ಥಾಂಟರು ಅಧ್ಯಕ್ಷ ಅಯೂಬರೊಡನೆ ಒಂದೂವರೆ ಘಂಟೆ ಮಾತುಕತೆ ನಡೆಸಿದರು

ಸರ್ ಭತೇಸಿಂಗರು ಉಪವಾಸ ಮುಂದುವರಿಸಿದ್ದಾರೆ

ಪೂರ್ವ ಕರ್ಮ ವಿಪಾಕವು

ಲೇಖಕಂ.— ಅ ದ ಅಯ್ಯಂಗಾರ್, ಹೊಂಗನೂರು

[ಮುಂದುವರಿದುದು]

ವೇದತ್ರವಣ ಮಾಡ ವುದು,, ಹಿತಕಾರ್ಯವನ್ನು ಮಾಡುವುದು, ಮಹಾ ವಿಷ್ಣು ಸ್ಥಾಪಿತ ಶುಭಕಾರ್ಯಾಚರಣೆ, ದ್ರವ್ಯದಾನ ಮಾಡುವುದು, ಅಶ್ವತ್ಥಪ್ರದಕ್ಷಿಣೆ, ಶ್ರೇಷ್ಠವಾದ ರತ್ನಗಳನ್ನು ಧರಿಸಿಕೊಳ್ಳುವಿಕೆ, ಒಡವೆಯನ್ನು ಕಾಪಾಡುವುದು ಈ ಪ್ರಯೋಗಗಳನ್ನು ಮಾಡಿದರೆ ಅಷ್ಟವಿಧವಾದ ಜ್ವರಗಳು ನಿವರ್ತಿಯಾಗುವುದು.

ಸಹಸ್ರ ಶಿರಸ್ಸುಗಳೂ ಸಹಸ್ರ ಮುಖಗಳೂ ಸಹಸ್ರ ಕಣ್ಣುಗಳೂ ಸಹಸ್ರ ಭುಜಗಳೂ, ಸಹಸ್ರ ಬಾಹುಗಳೂ ಸಹಸ್ರ ಪಾದಗಳೂ ಉಳ್ಳ ಶ್ರೀ ವಿಷ್ಣುವಿನ ಸಹಸ್ರನಾಮ ಪಾರಾಯಣವನ್ನು ಮಾಡಿದಾಗ ಜ್ವರಗಳು ಪರಿಹಾರವಾಗುತ್ತದೆ

ಗಣಪತಿಯನ್ನಾದರೂ ಪರಮಾತ್ಮನನ್ನಾದರೂ ಚಂದ್ರಮೌಳಿಯನ್ನಾದರೂ, ಸೂರ್ಯನಾರಾಯಣನನ್ನಾದರೂ, ದುರ್ಗಾದೇವಿಯನ್ನಾದರೂ ಆರಾಧನೆ ಮಾಡುವುದರಿಂದ ಎಂಟು ವಿಧವಾದ ಜ್ವರಗಳೂ ಪರಿಹಾರವಾಗುತ್ತವೆ.

ಬ್ರಹ್ಮಹತ್ಯೆಯನ್ನು ಮಾಡಿದವನಿಗೂ, ಬ್ರಾಹ್ಮಣ ಕ್ಷೇತ್ರವನ್ನು ಅಪಹರಿಸಿದವನಿಗೂ ಕ್ಷಯರೋಗವು ಪ್ರಾಪ್ತವಾಗುತ್ತದೆ

ಕ್ಷಯರೋಗ ಪ್ರಾಪ್ತಿಯಾದಾಗ ಶಕ್ತಿಗೆ ಲೋಪವಿಲ್ಲದಂತೆಯಾದರೂ ಕಡಿಗೆ ಒಂದು ಪಲ್ಲದ ತೂಕ ಚಿನದಲ್ಲಿ ಎಲೆ ಮೊಗ್ಗು ಹೂವು ಕಾಯಿ ಗಳಿರುವಂತೆ ಬಾಳೀಮಾಡವನ್ನು ಮಾಡಿಸಿ ವಸ್ತ್ರಗಳಿಂದಲೂ ಸೂತ್ರಗಳಿಂದಲೂ ಆ ಮರವನ್ನು ಅಲಂಕರಿಸಿ ಯಥಾ ವಿಧವಾಗಿ ಗಂಧಪುಷ್ಪಾಕ್ಷತೆಗಳಿಂದ ಪೂಜೆಮಾಡಿ ಬ್ರಾಹ್ಮಣನ ಮೂಲಕ ಹೋಮಮಾಡಿಸಿ ಭಕ್ಷ್ಯಭೋಜ್ಯಾದಿಗಳಿಂದ ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿ ಆವೇಲೆ ಒಡವನಾಗಿಯೂ ಶ್ರೋತ್ರಿಯನಾಗಿಯೂ ಅಕ್ಷವೇದಿಯಾಗಿಯೂ ಕುಟುಂಬಿಯಾಗಿಯೂ ಇರುವ ಆಚಾರ್ಯನಿಗೆ ವಸ್ತ್ರಾಭರ್ದಲಂಕೃತವಾದ ಆ ಕದಳೀ ವೃಕ್ಷವನ್ನು ದಕ್ಷಿಣೆಯೊಂದಿಗೆ ದಾನಮಾಡಬೇಕು ; ದಾನಕಾಲದಲ್ಲಿ ಆ ರೋಗಿಯು

ಶ್ಲೋ ॥ ಹಿರಣ್ಯಗರ್ಭ ಪುರುಷ ಪರಾತ್ಪರ ಜಗನ್ಮಯ ।
ರಂಭಾದಾನೇನದೇವೇಶ ಕ್ಷಯಂ ಕ್ಷಪಯಮೇ ಪ್ರಭೋ ॥

ಎಂಬ ಮಂತ್ರವನ್ನು ಹೇಳಿ ದಾನವನಾಡಿದನೇಲೆ, ವೇದವಾಂಗತಂತಾದ ಬ್ರಾಹ್ಮಣನಿಂದ ಕೂಡಿ, ಪುಣ್ಯಾಹವನ್ನು ಮಾಡಿ. ಆಮೇಲೆ ಭಕ್ಷ್ಯಭೋಜ್ಯಾದಿಗಳಿಂದ ಈ ಬ್ರಾಹ್ಮಣ, ಬಂಧು, ಇಷ್ಟರಿಗೂ ಭೋಜನ ಮಾಡಿಸಿ ತಾನೂ ಭೋಜನ ಮಾಡಿದರೆ ಜ್ವರವು ಪರಿಹಾರವಾಗುತ್ತದೆ. [ಮುಂದುವರಿಯುವುದು

ನಾಳೆ ಮಹಾಲಯವಕ್ಷಾರಂಭ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳ ಹೆಚ್ಚಳಕ್ಕಾಗಿ ಪಡೆಯಲಿ

ವುಡಲ್ಯಾಂಡ್ಸ್ ಯಶಸ್ವಿ 3 ನೇ ವಾರ

ನೀವು ಇದುವರಿಗೂ ನೋಡದಿರುವ ಅದ್ಭುತ ದೃಶ್ಯಗಳನ್ನೂ, ವಿಚಿತ್ರಗಳನ್ನೂ ನೋಡಿ ಆನಂದಿಸಿ

ಭೂತ್ ಬಂಗ್ಲ (ಹಿಂದಿ) Bhoot Bangla

ಮಹಮೂದ್, ಕನುಜ, ನಾಜರ್ ಹುಸೇನ್, ಅಸಿತ್ ಸೇನ್ ನಾನಾಪಾಲ್ ಸಿಕಂದ್

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಜನಭರಿತ 2 ನೇ ವಾರ

ವೀರ ಅಭಿಮನು (ತೆಲುಗು)

ಶಾಶ್ವತ— ಎಸ್ ಟಿ ರಾವ್‌ರಾವ್, ಕಾಂಚನ, ಕಾಂತಾರಾವ್, ರಾಜನಾಲ ಪದ್ಮನಾಭಂ, ಸೋಮಯಾಜುಲು, ಜಿ ವಂಲಕ್ಷ್ಮಿ [ದಿನ 3 ಆಟಗಳು

SHAKTI SUDHA

A Superb Tonic

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality Printing — Neat Binding

Lakshminarasimha Press

Sivarampet, Mysore

Protect the Cow

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದಾಗಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣದಯೆ, ಶಾಖಾಹಾರ, ಪಶುವೈದ್ಯ ಎಂಬ ಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ಪೈಸೆ

Edited, Printed & Published by Dharma prachara nirata
M S Krishna Rao (Proprietor) at the Satyavadi Press
Chamarajapuram, Mysore 4